**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 842-2022**

**ಸಿ.ಡಬ್ಲ್ಯೂ -3, ಪಿ.ಡಬ್ಲ್ಯೂ -4**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ |
| ತಂದೆಯ ಹೆಸರು | : | ನಾಗರಾಜ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಮಂಕಳಲೆ ಗ್ರಾಮ, ಸಾಗರ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ :12.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಈಗ ನಾನು ನೋಡುತ್ತಿರುವ ದಾಖಲೆಯ ಮೇಲಿನ ಸಹಿ ನನ್ನದೇ ಆಗಿರುತ್ತದೆ. 2-3 ವರ್ಷಗಳ ಹಿಂದೆ ಪೊಲೀಸರು ಮಂಕಳಲೆ ಗ್ರಾಮದ ಸರ್ವೇ ನಂಬರ್ 64 ರಲ್ಲಿ ಗಲಾಟೆಯಾಗಿದೆ ಎಂದು ನಮ್ಮನ್ನು ಕರೆದುಕೊಂಡು ಹೋಗಿ ಪೊಲೀಸರು ಸ್ಥಳವನ್ನು ನೋಡಿಕೊಂಡು ಬಂದರು. ಸಾಕ್ಷಿಯು ನಿಪಿ 2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯು ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 7 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 7(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ- ಸ.ಸ.ಅ. ರವರಿಂದಃ-

1. ದಿಃ10.05.2022 ರಂದು ಪೊಲೀಸರು ಚಾಸ 1 ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸ 2 ರವರ ಸಮಕ್ಷಮ ಪಂಚನಾಮೆಯ ಕ್ರಮವನ್ನು ಜರುಗಿಸಿ ಪಂಚನಾಮೆಯ ಕಾಲಕ್ಕೆ ಪೋಟೋ ತೆಗೆದು, ಕಚ್ಚಾ ನಕಾಶೆಯನ್ನು ತಯಾರಿಸಿ ಪಂಚನಾಮೆಯನ್ನು ನಮಗೆ ಓದಿ ತಿಳಿಸಿದ ನಂತರ ತಿಳಿದುಕೊಂಡು ನಾನು ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲು:  ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ:</u>

1. ಆ ದಿನ ನಾನು ಒಬ್ಬನೇ ಪೊಲೀಸರು ಬಂದು ಸ್ಥಳವನ್ನು ನೋಡಿಕೊಂಡು ಹೋದ ನಂತರ ಸ್ಥಳಕ್ಕೆ ಹೋಗಿದ್ದೆ. ಪೊಲೀಸರು ಯಾವ ಕಾರಣಕ್ಕಾಗಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನೀಡಿದ ದಾಖಲೆಗೆ ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಎಲ್ಲವನ್ನು ಮುಗಿಸಿ ನಿಂತಾಗ ನಾನು ಹೋದೆ ಆಗ ಪೊಲೀಸರು ನನ್ನ ಬಳಿ ಸಹಿಯನ್ನು ಪಡೆದುಕೊಂಡರು. ನನ್ನನ್ನು ಮತ್ತು ಚಾಸ 2 ರವರನ್ನು ನಿಲ್ಲಿಸಿ ಪೊಲೀಸರು ಪೋಟೋ ತೆಗೆದುಕೊಂಡರು. ಪಂಚರಾಗಿ ಬರುವಂತೆ ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಾನು ಪೊಲೀಸರು ನೀಡಿದ ದಾಖಲೆಗೆ ಒಂದು ಸಹಿ ಮಾಡಿರುತ್ತೇನೆ. ಪೊಲೀಸರು ಏನು ಬರೆದುಕೊಂಡಿದ್ದಾರೆಂದು ನನಗೆ ಮಾಹಿತಿ ಇಲ್ಲ.

<u>ಮರು ವಿಚಾರಣೆ: ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.